## ಕಾವ್ಯಸಂಕ

ನೇಪಾಳದ ನ್ಯಾಯಾಂಗವು ಪ್ರಗತಿಪರ ಮತ್ತು ನಿಷ್ಠುರ ನ್ಯಾಯಾಧೀಶರನ್ನು ಹೊಂದಿದೆ. ಆದರೆ ಅವರ ಸಂಖ್ಯೆ ಬಹಳ ಕಡಿಮೆ ಇರುವುದು ವಿಷಾದನೀಯ. ನ್ಯಾಯಕ್ಕೆ ಬದ್ಧರಾಗಿರುವ ವಕೀಲರು ಬೆರಳೆಣಿಕೆಯಷ್ಟು ಮಾತ್ರ ಸಿಗುತ್ತಾರೆ. ಹಾಗಿದ್ದರೂ, ಸಂತ್ರಸ್ತರ ಧ್ವನಿಯನ್ನು ವರ್ಧಿಸುವಲ್ಲಿ ದೃಢವಾದ ನಿಲುವು ತಳೆದ ಮಾಧ್ಯಮಗಳ ಪಾತ್ರವು ಸಕಾರಾತ್ಮಕ ಬೆಳವಣಿಗೆಗಳಲ್ಲಿ ಒಂದು ಎನ್ನಬಹುದು. ಗಮನಾರ್ಹ ಪ್ರಸಾರ ಮತ್ತು ಹೂಡಿಕೆ ಇರುವ ಮುಖ್ಯವಾಹಿನಿಯ ಮಾಧ್ಯಮಗಳಿಗೆ ಪರ್ಯಾಯವಾಗಿ, ಕೆಲವು ಅಂತರ್ಜಾಲ ತಾಣಗಳು ಕೆಲಸ ಮಾಡುತ್ತಿವೆ. ಕೆಲವೊಮ್ಮೆ ಮಾಧ್ಯಮದ ಮಧ್ಯಪ್ರವೇಶವು ನ್ಯಾಯಾಲಯಗಳನ್ನು ದಾರಿತಪ್ಪದಂತೆ ತಡೆದ ಹಲವಾರು ನಿದರ್ಶನಗಳಿವೆ.

**◆ ಇದು ಖಾಸಗಿ ಪ್ರಶ್ನೆ. ನೀವು ತಾಳ್ಮೆಗೆಡುವುದು ಯಾವಾಗ?**

ಕವಿಯಾದ ನನಗೆ ಸಹಜವಾಗಿ ಕೋಪ ಬರುತ್ತದೆ. ನನ್ನ ಸಿಟ್ಟು ನಿಶಬ್ದವಾಗಿ ನನ್ನೊಳಗೆಲ್ಲೋ ಆಳದಲ್ಲಿ ಹುದುಗಿರುವಂತದ್ದು. ಒಬ್ಬ ಜವಾಬ್ದಾರಿಯುತ ಪ್ರಜೆಯಾಗಿ, ಸಮಾಜದೊಂದಿಗೆ ನೇರವಾಗಿ ತೊಡಗಿಸಿಕೊಳ್ಳುವ ಬಯಕೆಯು ಕಾನೂನು ಕ್ಷೇತ್ರದಲ್ಲಿ ಕೆಲಸ ಮಾಡಲು ಮತ್ತು ಪತ್ರಿಕೆಗಳಿಗೆ ಬರೆಯಲು ಪ್ರೇರೇಪಿಸಿತು. ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಾಬಲ್ಯವು ಕೆಲವರ ಕೈ ಸೇರಿ ಬಹುದೊಡ್ಡ ಸಮುದಾಯವನ್ನು ಶಕ್ತಿಹೀನವಾಗಿಸಿ ತೀವ್ರ ಸಂಕಷ್ಟಕ್ಕೆ ಸಿಲುಕಿಸಿರುವುದನ್ನು ಕಂಡಾಗ ಕೆಲವೊಮ್ಮೆ ಎಲ್ಲ ಚೌಕಟ್ಟನ್ನು ಮುರಿದು ಬಿಸಾಕಬೇಕು ಎನಿಸುತ್ತದೆ. ಮನುಷ್ಯಳಾಗಿ ನನಗಿರುವ ಅರಿವಿನ ಜವಾಬ್ದಾರಿಯು ಅನ್ಯಾಯದ ವಿರುದ್ಧ ದನಿ ಎತ್ತುವಂತೆ ನನ್ನನ್ನು ಒತ್ತಾಯಿಸುತ್ತದೆ. ಆದರೆ ನಾನು ಸವಾಲನ್ನು ಎದುರಿಸಲು ಮುಂದಾದಾಗಲೆಲ್ಲ, ಕೇವಲ ಬೇರೆಯವರು ಮಾತ್ರ ನನ್ನನ್ನು ವಿರೋಧಿಸದೆ ಸ್ವತಃ ಬೌದ್ಧಿಕ ಗಣ್ಯರು ನನ್ನ ಹೋರಾಟವನ್ನು ತಳ್ಳಿ ಹಾಕುತ್ತಾರೆ. ನಮ್ಮ ಕಣ್ಣಮುಂದೆ ಇರುವ ಬಹು ದೊಡ್ಡ ಸಮುದಾಯದ ಹಕ್ಕು ಮತ್ತು ನ್ಯಾಯದ ವಿಚಾರಗಳನ್ನು ನಿರಂತರವಾಗಿ ದಾರಿತಪ್ಪಿಸುವ ಮತ್ತು ತಪ್ಪು ದಾರಿಗೆಳೆಯುವ ಈ ಬೌದ್ಧಿಕ ವಲಯದವರೆಂದು ಕರೆಯಲ್ಪಡುವವರು ನನ್ನೊಳಗೆ ರೇಜಿಗೆ ಹುಟ್ಟಿಸಿ ಕೆರಳುವಂತೆ ಮಾಡುತ್ತಾರೆ. ಎಡವೋ ಬಲವೋ ಈ ಬೌದ್ಧಿಕ ದಾದಾಗಿರಿ ಹೆಣ್ಣಿನ ಕುರಿತು ಬಹುತೇಕ ಒಂದೇ ಬಗೆಯ ಅಭಿಪ್ರಾಯ ಹೊಂದಿರುವುದನ್ನು ಕಾಣಬಹುದು.

●

**ಸರಿತಾ ತಿವಾರಿ ಕವಿತೆಗಳು**

# ನನಗೆ ಹುಚ್ಚು ಹಿಡಿದಾಗ

ಯಾವಾಗ ನನಗೆ ಹುಚ್ಚು ಏರುತ್ತದೋ
ಆಗ ಓಡಿಹೋಗುತ್ತವೆ
ಎಲ್ಲಾ ಭಯಗಳು ನನ್ನಿಂದ ದೂರ

ಗೊತ್ತು ನನಗೆ ಆ ಹೊತ್ತು
ಯುದ್ಧಕ್ಕೆ ಹೊರಟ ಸೈನಿಕನಂತೆ
ಸಾಯುವ ಅಥವಾ ಬದುಕುವ
ಅರ್ಧಂಬರ್ಧ ಅವಕಾಶ

ನನಗೇನೂ ನೆನಪಿಲ್ಲ
ಜನರನ್ನು ನಿರ್ಲಕ್ಷಿಸಿದ
ಬೀದಿ ನಾಯಿಯಂತೆ
ಸಮಾಜ ನನ್ನ ಬೆನ್ನು ಹತ್ತಿದೆ.
ಕೊರಳಿಗೆ ಹಗ್ಗ ಬಿಗಿದು
ಕಾಲ ಕೆಳಗಿನ ನೆಲ ಸರಿಸಿ
ನೇತಾಡಲು ಸಜ್ಜಾಗಿರುವ
ವಧಾಕಾರನ ಆಜ್ಞೆ
ಸರ್ವಾಧಿಕಾರಿಯ ರಾಜ್ಯ

ಈಗ ತಾನೆ ಮಾತು ಕಲಿಯುತ್ತಿರುವ
ಮಗುವಿನ ತೊದಲು ನುಡಿಗಳಂತಿದೆ
ಬಹುಸಂಖ್ಯಾತರ ಅರ್ಥಕ್ಕೆ ದಕ್ಕದ
ಆದರೆ ನನ್ನ ತಿಳಿವಳಿಕೆಯ ಸತ್ಯ

ಹೌದು
ಅಂತಹ ಹುಚ್ಚುತನದ ಉತ್ತುಂಗದಲ್ಲಿ
ನಾನು ಗೀಚುತ್ತಿರುವೆ
ಕವಿತೆ
ಸುರಕ್ಷಿತ ಮನೆಗಳಲ್ಲಿ
ಬೆಚ್ಚಗಿರುವ ನನ್ನ ಆರಾಮ ಸ್ನೇಹಿತರೇ,
ಈ ಲೋಕದಲಿ ಹುಚ್ಚನಾಗುವುದಕ್ಕಿಂತ
ಸುಂದರ ಸಂಗತಿ ಅಥವಾ
ಅತಿರೇಕದ ಸೌಂದರ್ಯ
ಇನ್ನಾವುದಿರಬಹುದು?